# ಚೌಕಟ್ಟು ದಾಟಿದ ಎಮೋಜಿ



**ದಿನಕ್ಕೊಂದು ರೂಪ ಪಡೆಯುತ್ತಾ ಮನಸಿಗೆ ಮುದ ನೀಡುವ ಎಮೋಜಿಗಳು ಈಗ ಮನೆಗಳ ಒಳಾಂಗಣ ವಿನ್ಯಾಸದ ಭಾಗವಾಗಿಯೂ ಬಳಕೆಯಾಗುತ್ತಿವೆ.**

■ **ಪೃಥ್ವಿರಾಜ್**

ಸ್ಮಾರ್ಟ್‌ಫೋನ್ ಬಳಕೆದಾರರಿಗೆ 'ಎಮೋಜಿ'ಗಳು ಚಿರಪರಿಚಿತ. ಎಮೋಜಿ ಭಾಷೆಯೂ ಅಷ್ಟೇ ಪರಿಚಿತ.

ಪರಿಚಿತರು, ಅಪರಿಚಿತರು, ಸ್ನೇಹಿತರು, ಬಂಧುಗಳು... ಹೀಗೆ ಯಾರೇ ಸಂದೇಶ ಕಳಿಸಿದರೂ ಒಂದೇ ಒಂದು ಬೊಂಬೆಯ ಮೂಲಕ ನಮ್ಮ ಪ್ರತಿಕ್ರಿಯೆ ನೀಡಲು ಸಾಧ್ಯವಾಗುತ್ತಿದೆ. ಸಂತೋಷ–ದುಃಖ ಸೇರಿದಂತೆ ಎಲ್ಲ ಬಗೆಯ ಭಾವಗಳನ್ನು ಪ್ರಕಟಿಸುವುದಕ್ಕೆ ಈ ಎಮೋಜಿಗಳಿಂದ ಸಾಧ್ಯವಾಗುತ್ತಿದೆ. ಮುಖ್ಯವಾಗಿ ಮಾರುದ್ದ ಪ್ರತಿಕ್ರಿಯೆ ಬರೆಯುವುದನ್ನು ಎಮೋಜಿಗಳು ತಪ್ಪಿಸುತ್ತಿವೆ.

ಪ್ರಸ್ತುತ ಮಾರುಕಟ್ಟೆಗೆ ಬರುತ್ತಿರುವ ಎಲ್ಲ ಸ್ಮಾರ್ಟ್‌ಫೋನ್‌ಗಳ ಕೀಬೋರ್ಡ್‌ಗಳಲ್ಲಿ ನಮ್ಮ ಮಾನಸಿಕ ಸ್ಥಿತಿಯನ್ನು ವ್ಯಕ್ತಪಡಿಸುವುದಕ್ಕೆ ನೆರವಾಗುವ ಹಲವು ಎಮೋಜಿಗಳು ಲಭ್ಯವಿವೆ. ಸಾಮಾಜಿಕ ಜಾಲತಾಣಗಳಲ್ಲಿ ಆಡುವ ಆಟಗಳಲ್ಲೂ ಎಮೋಜಿ ಪಜಲ್ಸ್ ಈಚೆಗೆ ಹೆಚ್ಚಾಗಿ ರಾರಾಜಿಸುತ್ತಿವೆ.

ಎಮೋಜಿಗಳ ಅಪಾರ ಜನಪ್ರಿಯತೆಯನ್ನು ಜಾಲತಾಣಗಳ ಚೌಕಟ್ಟುಗಳಿಂದ ಹೊರಗೂ ಬಳಸಿಕೊಳ್ಳುವ ಆಲೋಚನೆ ಇಂಟೀರಿಯರ್ ಹಾಗೂ ಫ್ಯಾಷನ್ ಡಿಸೈನರ್ಸ್‌ಗಳಿಗೆ ಹೊಳೆದಿದೆ. ಅದರ ಫಲವಾಗಿ ಮೊಬೈಲ್ ಅಂಗಳಿದಿಂದಾಚೆಗೂ ಎಮೋಜಿಗಳು ಬಂದಿವೆ; ಮನೆಗಳ ಒಳಾಂಗಣ ವಿನ್ಯಾಸದಲ್ಲಿ ಅವುಗಳ ಬಳಕೆಯಾಗುತ್ತಿದೆ. ಕೊರೊನಾ ಸಂದರ್ಭದಲ್ಲಿ ಸಾಧ್ಯವಾದಷ್ಟು ಮನೆಗಳಿಗೇ ಸೀಮಿತವಾಗಿರಬೇಕೆಂದು ಹಲವರು ಯೋಚಿಸುತ್ತಿದ್ದಾರೆ. ಆದರೆ ಒಂದೇ ಕಡೆ ಗಂಟೆಗಟ್ಟಲೇ ಇರಬೇಕೆಂದರೆ ಎಂಥವರಿಗೂ ಬೇಜಾರು. ಇಂತಹ ಸಮಯದಲ್ಲಿ ಎಮೋಜಿಗಳು ಆಗಾಗ ಕಣ್ಣಿಗೆ ಕಾಣಿಸಿಕೊಂಡರೆ ಮನಸ್ಸು ಪ್ರಫುಲ್ಲಗೊಳ್ಳುತ್ತದೆ ಎನ್ನುವುದು ವಿನ್ಯಾಸಕಾರರ ಲೆಕ್ಕಾಚಾರ.

ಮಕ್ಕಳು ಹಾಗೂ ಹದಿಹರೆಯದವರು ಹೆಚ್ಚಾಗಿರುವ ಮನೆಗಳಲ್ಲಿ ಎಮೋಜಿಗಳ ಮೋಜು ಹೆಚ್ಚಾಗಿಯೇ ಇರುತ್ತದೆ. ಅವರನ್ನು ದೃಷ್ಟಿಯಲ್ಲಿಟ್ಟುಕೊಂಡು ಎಮೋಜಿ ಆಕಾರದಲ್ಲಿರುವ ತಲೆದಿಂಬುಗಳು, ಬ್ಯಾಗ್‌ಗಳು, ಎಮೋಜಿ ಚಿತ್ರಗಳಿರುವ ಲೋಟ–ತಟ್ಟೆಗಳು, ಹಾಸಿಗೆಗಳು, ಕಂಬಳಿಗಳು ಸೇರಿದಂತೆ ಹಲವು ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಗೆ ಪರಿಚಯಿಸಲಾಗುತ್ತಿದೆ.

## ಕಷ್ಟದಲ್ಲೂ ಸಂತೋಷ!

ನಗುವುದಕ್ಕೆ ಭಾಷೆಯ ಅಗತ್ಯವಿಲ್ಲದಿದ್ದರೂ ಮಾತನಾಡುವುದಕ್ಕೆ, ಬರೆಯುವುದಕ್ಕೆ ಭಾಷೆಯ ಅಗತ್ಯವಿದೆ. ಆದರೆ ಆನ್‌ಲೈನ್ ಸಂವಹನ ಬಂದ ನಂತರ, ಬರವಣಿಗೆ ರೂಪದಲ್ಲಿರುವ ಸಂದೇಶಗಳು, ಮಿಂಚಂಚೆಗಳು (ಇ–ಮೇಲ್) ಮನಸಿನಾಳದ ಭಾವನೆಗಳನ್ನು ಪ್ರಕಟಿಸುವುದಕ್ಕೆ ಪೂರ್ಣಪ್ರಮಾಣದಲ್ಲಿ ನೆರವಾಗುತ್ತಿಲ್ಲ ಎಂಬ ಕೊರಗಿತ್ತು. ಅಂದರೆ ಮಾತನಾಡುವಾಗ ಧ್ವನಿಯನ್ನು ಆಧರಿಸಿ ನಮ್ಮ ಸ್ಥಿತಿಯನ್ನು ಇತರರು ತಿಳಿಯಬಹುದು. ಆದರೆ ಎಸ್‌ಎಂಎಸ್, ಮೇಲ್‌ಗಳಲ್ಲಿ ಸಂದೇಶ ರೂಪದಲ್ಲಿ ತಿಳಿಸುವುದು ಕಷ್ಟವಾಗಿತ್ತು. ಆ ಕೊರತೆಯನ್ನು ನೀಗಿಸುವುದಕ್ಕಾಗಿಯೇ ಈ ಎಮೋಜಿಗಳು ಬಳಕೆಗೆ ಬಂದವು.

## ಏನಿದು ಎಮೋಜಿ?

1999ರಲ್ಲಿ ಮೊದಲ ಬಾರಿಗೆ ಬಳಕೆಗೆ ಬಂದ ಎಮೋಜಿಗಳ ತವರು ಜಪಾನ್. ಜಪಾನಿಸ್ ಭಾಷೆಯಲ್ಲಿ 'ಎ' ಎಂದರೆ ಗೊಂಬೆ, 'ಮೊಜಿ' ಎಂದರೆ ಕ್ಯಾರೆಕ್ಟರ್ ಎಂದು ಅರ್ಥ. ಪ್ರಸ್ತುತ ನೂರಾರು ರೂಪ ತಳೆದಿರುವ ಎಮೋಜಿ ಸ್ಮಾರ್ಟ್‌ಫೋನ್‌ಗೆ ಪರಿಭಾಷೆಯಾಗಿ ಬದಲಾಗಿದೆ. ಈ ಎಮೋಜಿಗಳಲ್ಲಿ ಸದಾ ಸ್ಮೈಲಿಗಳದ್ದೇ ಕಾರುಬಾರು. ಅತ್ಯಂತ ಜನಪ್ರಿಯವಾಗಿರುವ ಈ ಸ್ಮೈಲಿಗಳನ್ನು 1963ರಲ್ಲಿ ಹಾರ್ವೆ ಆರಸ್ ಬಾಲ್ ಎಂಬ ಅಮೆರಿಕದ ಗ್ರಾಫಿಕ್ ಆರ್ಟಿಸ್ಟ್ ತಯಾರಿಸಿದರು.

ಅಮೆರಿಕದ ಮೆಸಾಸುಚೆಟ್ಸ್‌ನಲ್ಲಿರುವ 'ಸ್ಟೇಟ್ ಮ್ಯೂಚುವಲ್ ಲೈಫ್ ಅಶುರೆನ್ಸ್ ಕಂಪನಿ' ತಮ್ಮ ಉದ್ಯೋಗಿಗಳಲ್ಲಿ ಆತ್ಮವಿಶ್ವಾಸ ತುಂಬುವುದಕ್ಕಾಗಿ, ನೋಡಿದ ಕೂಡಲೇ ಖುಷಿ ನೀಡುವ 'ಸಂತೋಷದ ಮುಖ' ಚಿತ್ರಿಸುವಂತೆ ಆರಸ್ ಬಾಲ್ ಅವರ ಬಳಿ ಕೇಳಿಕೊಂಡಾಗ, ಕೇವಲ ಹತ್ತೇ ನಿಮಿಷದಲ್ಲಿ ಅವರು ಸ್ಮೈಲಿ ತಯಾರಿಸಿಕೊಟ್ಟರು. ಹೀಗೆ ಆ ಸ್ಮೈಲಿ ಗೊಂಬೆಗಳನ್ನು ಉದ್ಯೋಗಿಗಳ ಅಂಗಿಯ ಕಿಸೆ ಹಾಗೂ ಟೈಗೆ ಅಂಟಿಸಿಕೊಳ್ಳುವುದಕ್ಕೆ ಸಾಧ್ಯವಾಗುವಂತೆ ಬ್ಯಾಡ್ಜ್ ರೂಪದಲ್ಲಿ ತಯಾರಿಸಿ ನೀಡಲಾಯಿತು. ಹೀಗೆ ಬಳಕೆಗೆ ಬಂದ ಸ್ಮೈಲಿಯೇ ಇಂದು ಹಲವು ರೂಪಗಳನ್ನು ಪಡೆದು ಎಮೋಜಿಯಾಗಿದೆ ಎಂದು ಹೇಳಲಾಗುತ್ತಿದೆ. ■

### ಎಮೋಜಿ ಸ್ವಾರಸ್ಯಗಳು

ಶಿಗೆಟಕಾ ಕುರಿಟಾ ಅವರು ಎಮೋಜಿಗಳನ್ನು ಸೆಲ್‌ಫೋನ್‌ಗಳಿಗೆಂದೇ ತಯಾರಿಸಿದರು.
2011ರಲ್ಲಿ ಆ್ಯಪಲ್ ಸಂಸ್ಥೆ ಐಒಎಸ್‌ನಲ್ಲಿ ಮೊದಲ ಬಾರಿಗೆ ಎಮೋಜಿಗಳನ್ನು ಪರಿಚಯಿಸಿತು.
2013ರಲ್ಲಿ ಆಂಡ್ರಾಯ್ಡ್ ಫೋನ್‌ಗಳಲ್ಲೂ ಎಮೋಜಿಗಳು ಬಳಕೆಗೆ ಬಂದವು.
2015ರಲ್ಲಿ ಆಕ್ಸಫರ್ಡ್ ವಿಶ್ವವಿದ್ಯಾಲಯ 'ಎಮೋಜಿ'ಯನ್ನು ವರ್ಡ್ ಆಫ್ ದಿ ಇಯರ್ ಎಂದು ಘೋಷಿಸಿತು.
ಯೂನಿಕೋಡ್ ಕನ್ಸರ್ಟಿಯಂ ಅವರು ಹೊಸ ಹೊಸ ಎಮೋಜಿಗಳನ್ನು ಸೇರಿಸುತ್ತಿದ್ದಾರೆ.
ಬರ್ತ್ ಡೇ ಕೇಕ್ ಹಾಗೂ ಪಿಜ್ಜಾ ಎಮೋಜಿಗಳು ಸಾರ್ವಕಾಲಿಕ ಜನಪ್ರಿಯ ಆಹಾರ ಎಮೋಜಿಗಳಾಗಿವೆ.
2015ರಲ್ಲಿ ಬಗೆ ಬಗೆಯ ಮೈ ಬಣ್ಣದ ಎಮೋಜಿಗಳನ್ನು ಬಳಕೆಗೆ ತರಲಾಯಿತು.
2019ರಲ್ಲಿ ಸುಮಾರು 230 ಎಮೋಜಿಗಳು ಬಳಕೆಗೆ ಬಂದಿವೆ.
ಪ್ರತಿ ವರ್ಷ ಜುಲೈ 17ನ್ನು 'ವಿಶ್ವ ಎಮೋಜಿ ದಿನ' ಎಂದು ಆಚರಿಸಲಾಗುತ್ತದೆ.
ಪ್ರಸ್ತುತ ಸುಮಾರು 3,000 ಎಮೋಜಿಗಳು ಬಳಕೆಯಲ್ಲಿವೆ.
ನ್ಯೂಯಾರ್ಕ್ ನಗರದ ಮ್ಯೂಸಿಯಂ ಆಫ್ ಆರ್ಟ್ ಮ್ಯೂಸಿಯಂನಲ್ಲಿ ಮೂಲ ಎಮೋಜಿಗಳನ್ನು ಸಂಗ್ರಹಿಸಿ ಇಡಲಾಗಿದೆ.